ಶ್ರೀ ಬಿ. ಬೈರಪ್ಪಾಜಿ.— ಮಾಸ್ಟರ್ ಪ್ಲಾನ್ ಹಿನ್ನೆಲೆ ಇಟ್ಟುಕೊಂಡು ಇದುವರೆಗೆ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಟ್ಟಿದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ತಾತ್ಕಾಲಿಕವಾಗಿ ದಿವಾನ್ ಮಾಧರಾವ್ ಕಮಿಟಿ ರಿಪೋರ್ಟನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಟ್ರಸ್ಟ್ ಬೋರ್ಡ್ ಮತ್ತು ಕಾರ್ಪೊರೇಷನ್ನಿಗೆ ತಿಳಿಸಿದ್ದೇನೆ.

ಶ್ರೀ ಕೆ. ದೇವಯ್ಯ.—ಬೆಂಗಳೂರು ನಗರ ಬೆಳೆಯುತ್ತಾ ಇರುವುದರಿಂದ ದೊಡ್ಡ ದೊಡ್ಡ ರಸ್ತೆಗಳ ಅವಶ್ಯಕತೆ ಇದೆ. ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೊಡುವಾಗ್ಗೆ ದೊಡ್ಡ ರಸ್ತೆಗಳು ಇರುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ನೋಡದೆ ಕೊಟ್ಟರೆ ಮುಂದೆ ಆತಂಕವಾಗುತ್ತದೆ. ಇದನ್ನು ತಡೆಗಟ್ಟಲು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಆತಂಕ ಉಂಟಾಗುತ್ತದೆ ಎಂಬುದು ಗಮನಕ್ಕೆ ಬಂದಿದೆ. ತೊಂದರೆಯಾಗದ ಹಾಗೆ ಮಾಸ್ಟರ್ ಪ್ಲಾನ್ ಇದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹೈ ವೇ ಪಕ್ಕದಲ್ಲಿ ದೊಡ್ಡ ಇಂಡಸ್ಟ್ರೀಸ್ ಪ್ರಾರಂಭ ಮಾಡುವುದಕ್ಕಾಗಿ ದೊಡ್ಡ ದೊಡ್ಡ ನಿವೇಶನಗಳನ್ನು ತೆಗೆದುಕೊಂಡಿದ್ದಾರೆ. ಟ್ರಸ್ಟ್ ಬೋರ್ಡ್ ಅನುಮತಿ ಪಡೆದು ತೆಗೆದುಕೊಂಡಿದ್ದರೆ ತೊಂದರೆ ಬರುವುದಿಲ್ಲ. ಆದರೂ ಕೂಡ ಇನ್ನು ಮುಂದೆ ಇಂಥಾದ್ದನ್ನು ತಡೆಗಟ್ಟುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ನಗರಾಭಿವೃದ್ಧಿ ವ್ಯಾಪ್ತಿಯೊಳಗೆ ಇದ್ದರೆ ಅದು ಅನ್ವಯಿಸುತ್ತದೆ. ಟ್ರಸ್ಟ್ ಬೋರ್ಡ್ ಕೇಳಿ ಮಾಡಬೇಕಾಗುತ್ತದೆ. ಹೊರಗಡೆ ಇದ್ದರೆ ರೆವೆನ್ಯೂ ಅಥಾರಿಟೀಸ್ ಕೇಳಿ ಮಾಡಬೇಕಾಗುತ್ತದೆ.

Setting up of a Sericultural farm in Nanjangud Taluk.

*Q.—519. Sri N. RACHAIAH (Nanjangud).

Will the Government to pleased to state:

(*a*) whether it is not a fact that about 30,000 acres of land is under mulberry cultivation in Nanjangud Taluk, Mysore District;

(*b*) whether it is also a fact that two sites have been inspected for setting up a Sericultural Farm in the said Taluk with a view to encourage this Industry;

(*c*) whether they intend settings up such a Farm with a view to help the ryots of Nanjangud Sub-Division and if so, when the work would be started ?

*A.—Sri R. DAYANANDASAGAR (Deputy Minister for Sericulture).

(*a*) The area under mulberry in Najangud Taluk, Mysore District is about 24,500 acres.

(*b*) Yes.

(*c*) Yes; the matter is under consideration.

ಶ್ರೀ ಎನ್. ರಾಚಯ್ಯ.— ನಂಜನಗೂಡು ತಾಲ್ಲೂಕಿನಲ್ಲಿ ಮಲ್‌ಬರಿ ಕಲ್ಟಿವೇಷನ್ ಇರತಕ್ಕ ಜಮೀನು ಎಷ್ಟು ಎಕರೆ ಇದೆ ?

† ಶ್ರೀ ಆರ್. ದಯಾನಂದಸಾಗರ್.— 24,500 ಎಕರೆ ಜಮೀನು ಇದೆ.

ಶ್ರೀ ಎಂ. ಸಿ. ಬಸಪ್ಪ.—ನಂಜನಗೂಡು ತಾಲ್ಲೂಕಿನಲ್ಲಿ ಒಂದು ಸಿರಿಕಲ್ಚರ್ ಫಾರಂ ಪ್ರಾರಂಭ ಮಾಡುವುದನ್ನು ಮೂರನೇ ಪಂಡವಾರ್ಷಿಕ ಯೋಜನೆಯಲ್ಲಿ ಸೇರಿಸುತ್ತೀರಾ ?

ಶ್ರೀ ಆರ್. ದಯಾನಂದಸಾಗರ್.—ಸೇರಿಸಬೇಕೆಂದು ಇದೆ.

---

†Indicates that the remarks or speeches have not been revised by the member concerned.

ಶ್ರೀ ಎನ್. ರಾಚಯ್ಯ.—ಈ ಸಿರಿಕಲ್ಚರ್ ಫಾರಂ ಪ್ರಾರಂಭ ಮಾಡುವುದಕ್ಕೆ ಬೇಕಾಗುವ ಜಮೀನು ಬಿಟ್ಟು ಕೊಡುವುದಕ್ಕೆ ಜನ ಒಪ್ಪಿದ್ದಾರೆಯೇ ?

ಶ್ರೀ ಆರ್. ದಯಾನಂದಸಾಗರ್.—ಜನ ಒಪ್ಪಿದ್ದಾರೆ. ಕೆಲವು ಮುಜರಾಯಿ ಮತ್ತು ಇನಾಂ ಲ್ಯಾಂಡ್ಸ್ ಇವೆ. ಕಾನೂನು ಪ್ರಕಾರ ಅಕ್ವಿಸೀಷನ್ ಪ್ರೊಸೀಡಿಂಗ್ಸ್ ನಡೆಸಿ ಜಮೀನು ಆಕ್ವೈರ್ ಮಾಡಲಾಗುವುದು.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಮಲಬರಿ ಫಾರಂ ಮಾಡುವುದಕ್ಕೆ ಸರ್ಕಾರಿ ಆಜ್ಞೆಯಾಗಿದೆ. ಆದುದರಿಂದ ಇದನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ ?

ಶ್ರೀ ಆರ್. ದಯಾನಂದಸಾಗರ್.—ಅದಿನ್ನೂ ಪ್ರೋಸೆಸಿಂಗ್‌ನಲ್ಲಿದೆ. ಭೂಮಿ ಆಕ್ವೈರ್ ಆಗಬೇಕು.

12.30 P.M.

ಶ್ರೀ ಎನ್. ರಾಚಯ್ಯ.—25 ಸಾವಿರ ಎಕರೆ ಭೂಮಿಯ ಬಗ್ಗೆ ಈಗಾಗಲೇ ಮುಚ್ಚಳಿಕೆ ಬರೆಸಿ ಕೊಂಡಿದ್ದಾರೆ. ಕೆಲಸವನ್ನು ಪ್ರಾರಂಭಮಾಡುವುದಕ್ಕೆ ಇನ್ನೂ ಎಷ್ಟು ದಿವಸಗಳುಬೇಕು ?

ಶ್ರೀ ಆರ್. ದಯಾನಂದ ಸಾಗರ್.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಂ. ಸಿ. ಬನಪ್ಪ.—ಈಗ ಮೈನೂರಿನಲ್ಲಿರುವ ತಕ್ಕ ಫಾರಮನ್ನು ನಂಜನಗೂಡಿಗೆ ಷಿಫ್ಟ್ ಮಾಡುತ್ತೀರಾ ಅಥವಾ ಇದನ್ನು ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದ ಯೋಜನೆಯ ಅಂಗವಾಗಿ ಇದನ್ನು ಪ್ರಾರಂಭಮಾಡುತ್ತಿದ್ದೀರಾ ?

ಶ್ರೀ ದಯಾನಂದ ಸಾಗರ್.—ಅದನ್ನೀಗ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎನ್. ರಾಚಯ್ಯ. ಈ ಕೆಲಸವನ್ನು ಕೈಕೊಳ್ಳುವುದಕ್ಕೆ ಇರತಕ್ಕ ತೊಂದರೆಯಾದರೂ ಏನು ?

ಶ್ರೀ ಆರ್. ದಯಾನಂದ ಸಾಗರ್.—ಜಿಲ್ಲಾಧಿಕಾರಿಗಳು ಜಮೀನನ್ನು ಆಕ್ವೈರ್ ಮಾಡಬೇಕು. ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಆಗಬೇಕು. ಇದೆಲ್ಲಾ ಆದ ನಂತರ ಮಾಡಲಾಗುತ್ತದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಆಕ್ವೈರ್ ಮಾಡತಕ್ಕ ಭೂಮಿಯಲ್ಲೇ ಈ ಫಾರಮನ್ನು ಮಾಡಬೇಕೆಂದಿದ್ದೀರೋ ಅಥವಾ ಬೇರೆ ಕಡೆ ಮಾಡಬೇಕೆಂದಿದ್ದೀರೋ ?

ಶ್ರೀ ಆರ್. ದಯಾನಂದ ಸಾಗರ್.—ಅದೆಲ್ಲವನ್ನೂ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ. ಬನಪ್ಪ.—ತಾವು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಬೇಕೆಂದಿರತಕ್ಕ ಫಾರಂಗಳೆಷ್ಟು, ಅದರಲ್ಲಿ ಈ ನಂಜನಗೂಡಿನದೂ ಸೇರಿದೆಯೇ ?

ಶ್ರೀ ಆರ್. ದಯಾನಂದ ಸಾಗರ್.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಉತ್ತರ ಒದಗಿಸ ಲಾಗುತ್ತದೆ.

———

Cutting of Tamarind Trees in Shorapur Taluk.

*Q.—543. Sri RAJA PID NAIK (Shorapur).—

Will the Government be pleased to state :—

(*a*) whether they are aware that tamarind trees are being cut indiscriminately in Shorapur Taluk and used as fire wood ;

(*b*) whether they are also aware that as a result, Government is loosing revenue and tamarind is becoming scarce and costly in the said Taluk ;

(*c*) if so, whether they would take immediate action in the matter ?